# ಸತ್ಯದಲ್ಲಿ ಜೀವಿಸುವುದು

## ಕ್ರಿಸ್ತನಲ್ಲಿ ನನ್ನ ಜೀವಿತಕ್ಕೋಸ್ಕರ
## ಕಾರ್ಯರೂಪದ ಸೂತ್ರಗಳು

# ಸತ್ಯದಲ್ಲಿ ಜೀವಿಸುವುದು

ಕ್ರಿಸ್ತನಲ್ಲಿ ನನ್ನ ಜೀವಿತಕ್ಕೋಸ್ಕರ ಕಾರ್ಯರೂಪದ ಸೂತ್ರಗಳು.

ನನ್ನ ಪ್ರೀತಿಯು ದೇವರಿಗೆ ಮತ್ತು ರಕ್ಷಕನಾದ ಯೇಸುಕ್ರಿಸ್ತನಿಗೆ.

1. ನನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಮನಸ್ಸಿನಿಂದಲೂ ಮತ್ತು ಪೂರ್ಣ ಶಕ್ತಿಯಿಂದಲೂ ನನ್ನ ಕರ್ತನಾದ ದೇವರನ್ನು ನಾನು ಪ್ರೀತಿಸಲೇಬೇಕು. ಇದೇ ಮೊದಲನೆಯದು, ಹಾಗೂ ಮಹತ್ತರವಾದ ಆಜ್ಞೆಯಾಗಿದೆ. ಇನ್ನುಮುಂದೆ ಬರುವ ಎಲ್ಲಾದರಲ್ಲಿ ಇದನ್ನು ಸೇರಿಸಿದೆ. ಮಾರ್ಕ 12: 30

2. ದೇವರ ಸೇವೆಯೇ ನನ್ನ ಜೀವಿತದಲ್ಲಿ ಮೊದಲಾಗಿರಬೇಕು, ಮತ್ತ್ಯಾವುದೂ ಹೆಚ್ಚು ಪ್ರಾಮುಖ್ಯವಲ್ಲ. ಮತ್ತಾಯ 6: 33

3. ಕರ್ತನ ಎಲ್ಲಾ ಕೆಲಸವನ್ನು ಸಾಧ್ಯವಾದಷ್ಟು ನಿಷ್ಠೆಯಿಂದಲೂ, ಶ್ರದ್ಧೆಯಿಂದಲೂ ಮಾಡಬೇಕೆಂಬುದೇ ನನ್ನ ಸ್ಥಿರವಾದ ಆಕಾಂಕ್ಷೆಯಾಗಿರಬೇಕು. ಮತ್ತಾಯ 24: 45-47; ಅ. ಕೃ. 20: 28

4. ಅವಿಧೇಯರನ್ನೂ ವಿಶ್ವಾಸವಿಲ್ಲದವರನ್ನೂ ಸಂಪೂರ್ಣವಾಗಿ ನಾಶ ಮಾಡುವ ಆತನಿಗೆ ನಾನು ಹೆದರಬೇಕು. 2 ಥೆಸಲೋನಿಕ 1: 7-9; ಮತ್ತಾಯ 10: 28; ಮತ್ತಾಯ 25: 30

## ಸಭೆಯೊಂದಿಗೆ ನನ್ನ ಆರಾಧನೆ

5. ವಾರದ ರೊಟ್ಟಿ ಮುರಿಯುವಾಗ ಯೇಸುಸ್ವಾಮಿಯನ್ನು ನೆನಸಿಕೊಳ್ಳುವುದರಲ್ಲಿ ನಾನು ನಿಷ್ಠೆಯಿಂದಿರಬೇಕು. ಮತ್ತಾಯ 26: 26, 28; 1 ಕೊರಿ. 11: 23-26; ಅ. ಕೃ. 2: 42; ಅ. ಕೃ. 20:7

6. ನಾನು ಸಭೆಗೆ ಮುಂಚಿತವಾಗಿರಬೇಕು ಮತ್ತು ಸಭೆಯು ಸಮಯಕ್ಕೆ ಸರಿಯಾಗಿ ಪ್ರಾರಂಭವಾಗುವದನ್ನು ನೋಡಬೇಕು. ಸೋಮಾರಿತನವು ಕ್ರಿಸ್ತನಿಗೆ ಗೌರವ ತರದು. ರೋಮಾ. 12: 11; 1 ಕೊರಿಂಥ 14: 40

7. ನನ್ನ ಸಹೋದರ, ಸಹೋದರಿಯರನ್ನು ನಾನು ಉತ್ಸಾಹದ ಸ್ನೇಹದ ಮತ್ತು ಹರ್ಷಚಿತ್ತದ ಅಭಿನಂದನೆಯಿಂದ ಸಂಧಿಸಬೇಕು. ಯೋಹಾನ 13: 34; ರೋಮಾ. 12: 10; ಎಫೆಸ 5: 2; ಕೊಲೊಸ್ಸೆ 3: 14; 1 ಥೆಸ. 4: 9

8. ಎಲ್ಲಾ ಆರಾಧನೆಗಳಲ್ಲಿಯೂ ಹೇಳಿದ ಮತ್ತು ಮಾಡಿದ ಎಲ್ಲಾದರಲ್ಲಿಯೂ ನಾನು ಜಾಗರೂಕ ಮನಸ್ಸಿನಿಂದ ಏಕಾಗ್ರತೆಹೊಂದಲು ಪ್ರಯತ್ನಿಸುತ್ತೇನೆ. 1 ಕೊರಿಂಥ 10: 31; 1 ಕೊರಿ. 11: 29

9. ಸಾರ್ವಜನಿಕವಾಗಿ ಪ್ರಾರ್ಥನೆ ಮಾಡಲು ಕರೆಯಲ್ಪಟ್ಟರೆ, ನಾನು ದೈನ್ಯವಾಗಿಯೂ ಮತ್ತು ಸರಳ ಭಾಷೆಯಲ್ಲೂ ಪ್ರಾರ್ಥಿಸಬೇಕು. ಎಫೆಸ 6: 18; ಫಿಲಿಪ್ಪಿ 4: 6; ಕೊಲೊಸ್ಸೆ 4: 2; ಪ್ರಸಂಗಿ 5: 2

10. ಸಭಾ ಸಂಗ್ರಹಣಕ್ಕೆ ಧಾರಾಳವಾಗಿ ಕೊಡುವುದರಿಂದ ನಾನು ಕರ್ತನಿಗೇ ಕೊಟ್ಟಂತಾಗುವುದು 2 ಕೊರಿ. 8: 12-15; 2 ಕೊರಿ. 9: 6,7

11. ಸಭೆಯ ಕೆಲಸಗಳಿಗೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾದ ಎಲ್ಲಾ ಪ್ರಯಾಸವನ್ನು ಗಮನವನ್ನು ನಾನು ಕೊಡಬೇಕು 1 ತಿಮೋಥೆ 4: 12-16; 2 ತಿಮೊಥೆ 2: 15

## ನನ್ನ ಖಾಸಗಿ ಆರಾಧನೆ

12. ಕನಿಷ್ಠ ಪ್ರತಿ ಬೆಳಿಗ್ಗೆ ಮತ್ತು ರಾತ್ರಿ ನಾನಾಗಿಯೇ ಪ್ರಾರ್ಥನೆ ಮಾಡಬೇಕು. ಲೂಕ 18:1; ಮತ್ತಾಯ 7:7; ಮತ್ತಾಯ 6:9-13

13. ನಾನು ಪ್ರತಿಯೊಂದಕ್ಕೂ ದೇವರಿಗೆ ಕೃತಜ್ಞತೆ ಸಲ್ಲಿಸಬೇಕು. ಅತಿ ಸಾಧಾರಣವಾದವುಗಳಿಗೂ ಸಹ ಮತ್ತು ಪ್ರತಿ ಭೋಜನಕ್ಕೂ ಒಂದು ಪುಟ್ಟ ಧನ್ಯವಾದ (ಪ್ರಾರ್ಥನೆ)ಯನ್ನು ಹೇಳಬೇಕು. ಎಫೆಸ 5:20; ಕೊಲೊಸ್ಸೆ 3:15-17; 1 ಥೆಸ. 5:18; ಇಬ್ರಿಯ 13:15

14. ಪ್ರತಿದಿನವೂ ನಾನು ಧ್ಯಾನಾಸಕ್ತನಾಗಿ ದೇವರ ವಾಕ್ಯವನ್ನು ಓದಬೇಕು ಮತ್ತು ಅವುಗಳನ್ನು ಹೆಚ್ಚಿನ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯಮಾಡಲು ಆತನನ್ನು ಕೇಳಿಕೊಂಡು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಯೋಹಾನ 5:39; ಅ.ಕೃ. 17:11; ಅ.ಕೃ. 20:37.

15. ಅನೇಕ ಸತ್ಯವೇದದ ಭಾಗಗಳನ್ನು ಕಲಿಯುವುದರಿಂದ, ಪ್ರತಿನಿತ್ಯದ ಮಾತುಕತೆಗಳಲ್ಲಿ ಕ್ರಿಸ್ತನಿಗಾಗಿ ನಾನೇ ನನ್ನನ್ನು ಸಾಕ್ಷಿಯಾಗಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. 1 ಪೇತ್ರ 3:15; ಕೊಲೊಸ್ಸೆ 4:6

## ಪ್ರತಿಯೊಬ್ಬರಿಗೂ ನನ್ನ ಕರ್ತವ್ಯ

16. ದೇವರು ನನಗೆ ತೋರಿಸಿರುವ ಕೃಪೆಗೆ ನಾನು ಅಪಾತ್ರನೆಂದು ತಿಳಿದಿದ್ದರೂ, ನಾನೂ ಯಾವಾಗಲೂ ಇತರರಿಗೆ, ಅವರನ್ನು ಅಪಾತ್ರರೆಂದು ನಾನು ಪರಿಗಣಿಸಿದಾಗ್ಯೂ ಕನಿಕರ ಉಳ್ಳವನಾಗಿರಬೇಕು. ಮತ್ತಾಯ 5:44-48

17. ಒಳ್ಳೆಸಮಾರ್ಯದವನನ್ನು ಜ್ಞಾಪಕಮಾಡಿಕೊಂಡು ಕೊರತೆಯಲ್ಲಿರುವವರಿಗೆ ಸಹಾಯಮಾಡಲು ನಾನು ಸದಾ ಸಿದ್ಧನಿರಬೇಕು. ಲೂಕ 10:30-37; 1 ಯೋಹಾನ 3:17; ಯಾಕೋಬ 2:15,16

18. ರೋಗಿಗಳಿಗೆ, ವೃದ್ಧರಿಗೆ, ಅನಾಥರಿಗೆ ಮತ್ತು ವಿಧವೆಯರಿಗೆ ಮುಖ್ಯವಾಗಿ ಸಭೆಯಲ್ಲಿರುವವರಿಗೆ, ನಾನು ಸಾಧ್ಯವಾದಷ್ಟು ನನ್ನ ಪ್ರೀತಿಯ ಗಮನವನ್ನು ಕೊಡಬೇಕು. ರೋಮಾ. 12:13; 2 ಕೊರಿ. 9:6-8; ಇಬ್ರಿಯ 13:16

19. ನಾನು ಯಾವಾಗಲೂ ತಡಮಾಡದೆ ಬಾಕಿಯನ್ನು ತೀರಿಸಬೇಕು; ರೋಮಾ 13:8

20. ನನ್ನ ಸ್ವಾಧೀನಾನುಭವದ ಯಾವುದನ್ನೇ ಆಗಲೀ ಅದನ್ನು ಎರವಲು ತೆಗೆದುಕೊಂಡಿರಲಿ ಅಥವಾ ಕಳ್ಳತನದಿಂದ ತೆಗೆದುಕೊಂಡು ಹೋಗಿರಲಿ, ಅದನ್ನು ಬಲಾತ್ಕಾರದಿಂದ ಹಿಂದಿರುಗಿಸಲು ನಾನು ಪ್ರಯತ್ನಿಸಬಾರದು. ಲೂಕ 6:35

21. ದೊಡ್ಡ ವಿಷಯವೇ ಆಗಿರಲಿ ಚಿಕ್ಕದೇ ಆಗಿರಲಿ, ನನ್ನ ಶತ್ರುಗಳಾದವರಿಗೋಸ್ಕರವೂ ಸಹ ನಾನು ಪ್ರಾರ್ಥಿಸಬೇಕು. ಅವರ ಕೆಟ್ಟ ನಡವಳಿಕೆಗೆ ನಾನು ಒಳ್ಳೇತನದ ಪ್ರತಿಕ್ರಿಯೆ ತೋರಬೇಕು. ಲೂಕ 23:34 ಮತ್ತಾಯ 5:44 ; 1 ಕೊ. 4:12-13; 1 ಪೇತ್ರ 3:9; ರೋಮಾ. 12:21

22. ನನ್ನ ಕರ್ತನ ಮಾದರಿಯು ಬಲಾತ್ಕಾರ ಅಥವಾ ಹಿಂಸೆಯನ್ನು ಉಪಯೋಗಿಸಲು ನನ್ನನ್ನು ತಡೆಯುತ್ತದೆ. ಮತ್ತಾಯ 5:39; ಮತ್ತಾಯ 26:52; ರೋಮಾ 12:17-19

23. ಅತಿಯಾಗಿ ಉದ್ರೇಕಿಸಿದಾಗಲೂ ಕೂಡ ನಾನು ಯಾವಾಗಲೂ ವಿನೀತನಾಗಿರಬೇಕು ಮತ್ತು ಎಲ್ಲಾ ರೀತಿಯ ಒರಟು ಮಾತುಗಳನ್ನು ಬಿಟ್ಟುಬಿಡಬೇಕು. 1 ಪೇತ್ರ 3: 8-9; ಇಬ್ರಿಯ 12: 14

24. ನನ್ನ ಪ್ರತಿದಿನದ ವ್ಯವಹಾರಗಳು ತುಂಬಾ ಯಥಾರ್ಥವಾಗಿಯೂ ಮತ್ತು ನಿರ್ಮಲವಾಗಿಯೂ ಇರಬೇಕು. ಪ್ರಪಂಚದಲ್ಲಿ ಸಾಮಾನ್ಯವಾಗಿ ಇರುವ ಮೋಸದ ವ್ಯವಹಾರದ ಪದ್ಧತಿಗಳಿಗೆ ನನಗೂ ಸಂಬಂಧ ವಿರಬಾರದು. ರೋಮಾ. 12: 17

25. ಎಲ್ಲಾ ವಿಷಯಗಳಲ್ಲಿಯೂ ಇತರರಿಂದ ನಾವು ಏನನ್ನು

ಬಯಸುತ್ತೇನೆಯೋ ಅದನ್ನೇ ನಾನು ಅವರಿಗೆ ಮಾಡಬೇಕು. ಮತ್ತಾಯ 7: 12

## ನನ್ನ ಸಹೋದರ ಸಹೋದರಿಯರಿಗೆ ನನ್ನ ವಿಶೇಷ ಕರ್ತವ್ಯ

26. ನಾನು ಯಾವಾಗಲೂ ಇತರರಲ್ಲಿ ಶ್ರೇಷ್ಠವಾದದ್ದನ್ನೇ ನೋಡಲು ಪ್ರಯತ್ನಿಸಬೇಕೇ ಹೊರತು ನಿಕೃಷ್ಟವಾದದ್ದನ್ನಲ್ಲ. ಮತ್ತಾಯ 7: 12; ಲೂಕ 6: 41; ೧ ಕೊರಿ. 13; 4-5

27. ನಾನು ಸುಲಭವಾಗಿ ಮನನೋಯಬಾರದು. ಅದಕ್ಕೆ ಬದಲು ದೇವರಿಂದ ನಾನು ಎಷ್ಟರಮಟ್ಟಿಗೆ ಕ್ಷಮಿಸಲ್ಪಟ್ಟಿದ್ದೇನೆಂದು ಜ್ಞಾಪಕ ಮಾಡಿಕೊಳ್ಳಬೇಕು. ಮತ್ತಾಯ 5: 23, 24; ಕೊಲೊಸ್ಸೆ 3: 12-14.

28. ತಾಳ್ಮೆಯಿಂದಲೂ ಮತ್ತು ದೀನತೆಯಿಂದಲೂ ಆಕ್ಷೇಪಣೆಯನ್ನು ನಾನು ಅಂಗೀಕರಿಸಬೇಕು. ಇಬ್ರಿಯ 13; 22; ಇಬ್ರಿಯ 12: 1-11; 2 ಕೊರಿ. 7: 8-11

29. ನನ್ನ ವಿರುದ್ಧವಾದ ಅಪಚಾರವನ್ನು ಪೂರ್ಣಹೃದಯದಿಂದ ನಾನೇ ಕ್ಷಮಿಸಲು ಸಿದ್ಧನಾಗಿರಬೇಕು. ಹಾಗೆ ನಾನು ಮಾಡದಿದ್ದಲ್ಲಿ ದೇವರು ನನ್ನನ್ನು ಕ್ಷಮಿಸುವುದಿಲ್ಲ. ಮತ್ತಾಯ 18: 21-22; 25 ಎಫೆಸ 4: 31, 32

30. ಕ್ರಿಸ್ತನಲ್ಲಿರುವ ನನ್ನ ಜೀವಿತದಲ್ಲಿ ಹೋರಾಡುವುದಕ್ಕೂ ಮತ್ತು ಜಗಳವಾಡುವುದಕ್ಕೂ ಯಾವ ಸ್ಥಾನವೂ ಇರಬಾರದು. ಪ್ರಪಂಚವು ಅಂತಹವುಗಳನ್ನು ಮಾಡುತ್ತದೆ. ತೀತ 3: 2; 2 ತಿಮೊಥೆ 2: 24

31. ನನ್ನ ನಡತೆಯಿಂದ ಅಥವಾ ಮಾತಿನಿಂದ ಕ್ರಿಸ್ತನಲ್ಲಿರುವ ಬಲಹೀನ ಸಹೋದರರು ಮತ್ತು ಶಿಶುಗಳು ಎಡವದಂತೆ ನಾನು ಎಚ್ಚರಿಕೆ

ವಹಿಸುವ ಅವಶ್ಯಕತೆ ಇದೆ. ರೋಮಾ 14:13 ಮತ್ತು 21; ೧ ಕೊರಿ. 8:13; ಮತ್ತಾಯ 18:6

## ನನ್ನ ಸ್ನೇಹಿತರು ಮತ್ತು ಕುಟುಂಬದವರೊಂದಿಗೆ ಸಂಬಂಧ

32. ನಾನು ಇಟ್ಟುಕೊಂಡಿರುವ ಒಡನಾಟ (ಸಹವಾಸ)ದ ಬಗ್ಗೆ ನಾನು ಎಚ್ಚರಿಕೆಯಿಂದಿರಬೇಕಾದದ್ದು ಅಗತ್ಯ. ಕೆಲವು ಸ್ನೇಹಿತರು ನನಗೆ ಸಹಾಯಮಾಡುತ್ತಾರೆ. ಆದರೆ ಕೆಲವರು ಕ್ರಿಸ್ತನನ್ನು ಹಿಂಬಾಲಿಸಲು ನನ್ನ ಪ್ರಯತ್ನಗಳಲ್ಲಿ ಆತಂಕ ಮಾಡುತ್ತಾರೆ. 1 ಕೊರಿಂಥ 15:33; 1 ಕೊರಿ. 5:6; ಫಿಲಿಪ್ಪಿ 4:8

33. ಸಹೋದರ ಸಹೋದರಿಯರ ಒಡನಾಟ ಮತ್ತು ಸಖ್ಯವನ್ನು ನಾನು ಹುಡುಕಬೇಕು ಮತ್ತು ಸಭೆಯಲ್ಲಿ ನನ್ನ ಸ್ನೇಹಿತರನ್ನು ಆರಿಸಬೇಕು. 1 ಪೇತ್ರ 4:3-5; ಎಫೆಸ 5:6-8; ಅ. ಕೃ. 2:42; ಇಬ್ರಿಯ 10:24-25

34. ಪ್ರಪಂಚವು ಸ್ವಾಭಾವಿಕವೆಂದು ವಿವೇಚಿಸಿದರೂ ನಾನು ವಿಗ್ರಹಾರಾಧನೆ ಮತ್ತು ವ್ಯಭಿಚಾರವನ್ನು ಬಿಟ್ಟುಬಿಡಬೇಕು. ವಿವಾಹದ ಹೊರಗೆ ಲೈಂಗಿಕ ಜೀವನ ಕರ್ತನ ದೃಷ್ಟಿಯಲ್ಲಿ ಹೇಸಿಕೆಯಾದದ್ದು. ದೇವರ ಆಲಯವೆಂದು ಕರೆಯಲ್ಪಡುವ ನನ್ನ ದೇಹವನ್ನು ಹೀನಾಯ ನೀತಿಗೆ ತರುವಂಥಾದ್ದಾಗಿದೆ. ನನ್ನನ್ನು ದುಷ್ಪ್ರೇರಣೆಗೆ ಒಳಗಾಗಿಸುವ ಸ್ನೇಹಿತರಿಗೆ ಆ ತರಹದ ಜೀವನಕ್ಕೆ ನನಗೆ ಯಾವ ಸಂಬಂಧವೂ ಇಲ್ಲವೆಂದು ನಾನು ಹೇಳಬೇಕು. 1 ಕೊರಿ. 5:9-11; 1 ಕೊರಿ. 6:13; 18, 19; ಎಫೆಸ 5:3; 1 ಥೆಸ. 4:3; ಮತ್ತಾಯ 5:28

35. ನಾನು ಅವಿವಾಹಿತನಾಗಿದ್ದರೆ, ಪರಿಶುದ್ಧತ್ವ ಮತ್ತು ಕ್ರಿಸ್ತನಿಗೆ ನಿಷ್ಠೆ ಇವು ಅಪೇಕ್ಷಿಸುವುದೇನೆಂದರೆ ನಾನು ಕರ್ತನಲ್ಲಿ ಮಾತ್ರ ವಿವಾಹ

ವಾಗಬೇಕು. ನಂಬಿಕೆಯಿಲ್ಲದ ಜೊತೆಗಾರತಿಯನ್ನು ಜೀವದಾದ್ಯಂತ ನನ್ನ ಕೊರಳಿಗೆ ಕಟ್ಟಿಕೊಳ್ಳುವುದು ನನಗೆ ಹುಚ್ಚುತನವಾಗುತ್ತದೆ. 1 ಕೊರಿ. 7:37;2 ಕೊರಿ. 6: 14

36. ನಾನೊಬ್ಬ ಪತಿಯಾಗಿದ್ದರೆ, ನನ್ನ ಪತ್ನಿಗೆ ದಯಾವಂತನೂ ಮತ್ತು ದಾಕ್ಷಿಣ್ಯಪರನೂ ಆಗಿರಬೇಕು, ಕ್ರಿಸ್ತನು ಸಭೆಗೋಸ್ಕರ ತನ್ನನ್ನೇ ಬಲಿಯಾಗಿಕೊಟ್ಟಂತೆ, ಆಕೆಗೋಸ್ಕರ ನನ್ನ ಯಾವ ಪ್ರಯತ್ನವನ್ನೂ ಬಿಡಬಾರದು. ಎಫೆಸ 5: 25; ಕೊಲೊಸ್ಸೆ; 3: 19; 1 ಪೇತ್ರ 3: 7

37. ನಾನೊಬ್ಬ ಪತ್ನಿಯಾಗಿದ್ದರೆ, ತನ್ನ ಕರ್ತನಾದ ಕ್ರಿಸ್ತನಿಗೆ ಸಭೆಯು ಹೇಗೆ ಅಧೀನವಾಗಿ ಮತ್ತು ವಿಧೇಯವಾಗಿರುತ್ತದೆಯೋ ಹಾಗೆ ನನ್ನ ಪತಿಯನ್ನು ಕುಟುಂಬದ ಯಜಮಾನನೆಂದು ಅಂಗೀಕರಿಸಬೇಕು. ಎಫೆಸ 5: 22-24; ಕೊಲೊಸ್ಸೆ 3: 18; 1 ಪೇತ್ರ 3: 1

38. ವಿವಾಹ ವಿಚ್ಛೇದವನ್ನು ನೆನೆಯಲೂ ಕೂಡದು. "ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು." ಮತ್ತಾಯ 19: 4-6; 1 ಕೊರಿ. 7: 10, 11

39. ನಾನೊಬ್ಬ ತಂದೆ/ತಾಯಿ ಆಗಿದ್ದರೆ, ದೇವರ ಸುವಾರ್ತೆಯ ಜ್ಞಾನದಲ್ಲಿಯೂ ಮತ್ತು ಒಳ್ಳೆ ನಡತೆಯಲ್ಲಿಯೂ ನನ್ನ ಮಕ್ಕಳಿಗೆ ಶಿಕ್ಷಣ ಕೊಡಲು ನನ್ನ ಪ್ರಯತ್ನಗಳನ್ನು ಸಡಿಲಗೊಳಿಸಬಾರದು. ಮನೆಯಲ್ಲಿ ಮಕ್ಕಳನ್ನು ನಡೆಸಿಕೊಳ್ಳುವ ರೀತಿಯಿಂದ ಅವರು ಬೇಸರಪಟ್ಟುಕೊಳ್ಳಲಾರದಂತೆ ನಾನು ಎಚ್ಚರಿಕೆ ವಹಿಸಬೇಕು. ಎಫೆಸ 6: 5; ಕೊಲೊಸ್ಸೆ 3: 21

40. ಒಬ್ಬ ಮಗನಾಗಿ ಅಥವಾ ಮಗಳಾಗಿ ಕರ್ತನಲ್ಲಿರಲಿ ಇಲ್ಲದಿರಲಿ, ನನ್ನ ತಂದೆ ತಾಯಿಗಳು ಕ್ರಿಸ್ತನ ಆಜ್ಞೆಗಳಿಗೆ ವಿರುದ್ಧವಾಗಿ ಏನನ್ನಾದರೂ ಮಾಡಲು ಹೇಳದ ಹೊರತು, ಅವರಿಗೆ ನಾನು ವಿಧೇಯನಾ/ಳಾಗಿರಬೇಕು.

ಅವರಿಗೆ ಸರಿಯಾದ ಗೌರವನ್ನು ಕೊಡಬೇಕು ಮತ್ತು ಹಿಂದಿರುಗಿ ಉತ್ತರ ಕೊಡಬಾರದು. ಎಫೆಸ 6: 1, 2; ಕೊಲೊಸ್ಸೆ 3: 20

## ನನ್ನ ದಿನನಿತ್ಯದ ಕೆಲಸ

41. ನಾನೊಬ್ಬ ಧಣಿಯಾಗಿದ್ದರೆ, ನನ್ನ ಕೆಲಸಗಾರರಿಗೂ ಮತ್ತು ಆಳುಗಳಿಗೂ ಕರುಣೆ, ನ್ಯಾಯ ಮತ್ತು ದಾಕ್ಷಿಣ್ಯಪರನೂ ಆಗಿರಬೇಕು. ಕೊಲೊಸ್ಸೆ. 4: 1; ಎಫೆಸ 6: 9

42. ನಾನು ಮತ್ತೊಬ್ಬರಲ್ಲಿ ಕೆಲಸಕ್ಕಿದ್ದರೆ, ನಂಬಿಕೆಯುಳ್ಳ ಹಾಗೂ ಶ್ರದ್ಧೆಯಿಂದ ಕೂಡಿದ ಸೇವೆಯನ್ನು ನಾನು ಕೊಡಬೇಕು. ನನಗೆ ತಿಳಿದ ರೀತಿಯಲ್ಲಿ ತಕ್ಕಷ್ಟು ಸ್ಥಿತಿ ಅಥವಾ ತಕ್ಕಷ್ಟು ಸಂಬಳವನ್ನು ನನ್ನ ಧಣಿಯು ಕೊಡದಿದ್ದರೂ ಸಹ ನಾನು ಇದನ್ನು ಮಾಡಬೇಕು. ಕೊಲೊಸ್ಸೆ 3: 22-25; ಎಫೆಸ 6: 5

43. ನಾನು ನನ್ನ ಧಣಿಗಳ ಆಸ್ತಿಯಿಂದ ಸ್ವಂತಕ್ಕಾಗಿ ಏನನ್ನೂ ತೆಗೆದು ಕೊಳ್ಳಬಾರದು; ಮೊದಲು ಅನುಮತಿ ಪಡೆಯದೆ ಒಂದು ಚಿಕ್ಕ ಪದಾರ್ಥ ವನ್ನೂ ತೆಗೆದುಕೊಳ್ಳಬಾರದು. ತೀತ 2: 9, 10; ಕೊಲೊಸ್ಸೆ 3: 22-25

## ನನ್ನ ಸಭಾ ಜೀವನದ ಸೂತ್ರಗಳು

44. ಸಭೆಯಲ್ಲಿ ನನಗೆ ತಿಳಿದ ಅತ್ಯುತ್ತಮವಾದ ಮಾದರಿಗಳನ್ನು ನಾನು ಅನುಸರಿಸಬೇಕು 1 ಕೊರಿ. 11: 1; ಫಿಲಿಪ್ಪಿ 3: 17; ಇಬ್ರಿಯ 13: 7

45. ನನ್ನ ಕೈಲಾದಷ್ಟು ಪ್ರತಿಯೊಂದು ರೀತಿಯಲ್ಲಿಯೂ ಮುಖ್ಯವಾಗಿ ಎಲ್ಲಾ ಸಭೆಗಳನ್ನೂ ಬೆಂಬಲಿಸುವುದರ ಮೂಲಕ ಸುವಾರ್ತಾ ಸೇವೆಗೆ ನಾನು ಯಾವಾಗಲೂ ಸಹಾಯ ಮಾಡಬೇಕು. ನಾನು ಹೊಂದಿರುವ

ಹಾಗೂ ನನಗೆ ಅತ್ಯಂತ ಅಮೂಲ್ಯವಾದ ನಿರೀಕ್ಷೆಯ ಬಗ್ಗೆ ನನಗೆ ದೊರಕುವ ಪ್ರತಿಯೊಂದು ಅವಕಾಶದಲ್ಲೂ ನಾನು ಸರಾಗವಾಗಿ ಇತರರಿಗೆ ಮಾತನಾಡಬೇಕು. ಲೂಕ 12: 8; ಮಾರ್ಕ 8: 38; 2 ತಿಮೋಥೆ 1: 8

46. ಸುಳ್ಳು ಬೋಧಕರ ಬಗ್ಗೆ ನಾನು ಎಚ್ಚರಿಕೆಯಿಂದರಬೇಕು. ಮತ್ತು ನಾನು ಕೇಳಿದವುಗಳೆಲ್ಲವನ್ನು ಸತ್ಯದ ವಾಕ್ಯದಿಂದ ಪರೀಕ್ಷಿಸಬೇಕು. 1 ಥೆಸ. 5:21; 2 ಪೇತ್ರ 2: 1; ಮತ್ತಾಯ. 24: 24

47. ಆಕ್ಷೇಪಣೆ ಮಾಡುವುದೂ ಗೊಣಗುವುದೂ ತುಂಬಾ ಕೆಡುಕನ್ನುಂಟು ಮಾಡುತ್ತದೆ. ಏನಾದರೊಂದು ತುಂಬಾ ತಪ್ಪಾಗಿದ್ದು ಅದನ್ನು ನಾನು ಉಪೇಕ್ಷಿಸಲಾಗದೆ ಅಥವಾ ಮರೆಯಲಾಗದಿದ್ದರೆ, ಸಂಬಂಧಪಟ್ಟವರಿಗೆ ನಾನು ಮಾತನಾಡಬೇಕು. ಆತನು ಗಮನಕ್ಕೆ ತೆಗೆದು ಕೊಳ್ಳದಿದ್ದರೆ, ಒಬ್ಬ ಸಲಹೆಗಾರರೊಂದಿಗೆ ಪುನಃ ಹೋಗಬೇಕು. ಹಾಗೂ ಏನೂ ಫಲಕಾರಿಯಾಗದಿದ್ದರೆ, ಆ ವಿಷಯವನ್ನು ನಾನು ಸಭೆಯ ಮುಂದಿಡಬೇಕು. ಫಿಲಿಪ್ಪಿ 2: 14, 15; ಮತ್ತಾಯ 18: 15:17

48. ಯಾರೊಬ್ಬರ ವಿರುದ್ಧ ಅಸೂಯೆಯನ್ನಾಗಲೀ ನಾನು ಬೆಳೆಸಿ ಕೊಂಡರೆ, ರೊಟ್ಟಿ ಮುರಿಯುವುದನ್ನು ತಪ್ಪಿಸಿಕೊಂಡರೆ, ಏನೂ ಪ್ರಯೋಜನವಿಲ್ಲ. ನನ್ನ ಹೃದಯದಿಂದ ಅಸಮಾಧಾನವನ್ನು ತೆಗೆದು ಹಾಕೆಂದು ದೇವರನ್ನು ಬೇಡಿಕೊಳ್ಳುವುದೊಂದೇ ಮಾರ್ಗ 1 ಕೊರಿ. 4:5; ಯಾಕೋಬ 3: 14-15; 1 ಯೋಹಾನ 4: 20-21

49. ಯಾವುದಾದರೊಂದು ವಿಷಯದಲ್ಲಿ ತಪ್ಪು ಮಾಡಿದ್ದರೆ, ನಾನು ಅದನ್ನು ಸರಾಗವಾಗಿ ಒಪ್ಪಿಕೊಳ್ಳಬೇಕು ಮತ್ತು ಕ್ಷಮಾಪಣೆ ಕೇಳಿಕೊಳ್ಳಬೇಕು. ಯಾಕೋಬ 5: 16; ಕೀ. 32: 5

50. ನನ್ನ ಸಭೆಯೊಳಗೆ ಜಗಳವು ಪ್ರವೇಶಿಸಬಾರದು. ಕರ್ತನಲ್ಲಿ

ನಾವೆಲ್ಲರೂ ಒಂದೇ ಕುಟುಂಬವಾಗಿದ್ದೇವೆ. ಕಹಿ ಭಾವನೆಗಳೂ ಕೂಡ ಕೆಟ್ಟದ್ದಾಗಿದೆ. ಎಫೆಸ 4: 29, 31, 32; ಕೊಲೊಸ್ಸೆ 4:6; ತೀತ 2: 7, 8

51. ಸಭೆಯಲ್ಲಿ ಪಕ್ಷಗಳನ್ನಾಗಲೀ ಅಥವಾ ಗುಂಪುಗಳನ್ನಾಗಲೀ ಮಾಡುವುದನ್ನು ತಪ್ಪಿಸಲು ನಾನು ಸಹಾಯಮಾಡಬೇಕು. ಕ್ರಿಸ್ತನು ಭಾಗವಾಗಿದ್ದಾನೋ? 1 ಕೊರಿ. 1: 12, 13; 1 ಕೊರಿ. 3: 3, 4; ಫಿಲಿಪ್ಪಿ 2: 1-3

52. ಕ್ರಿಸ್ತನಲ್ಲಿ ಜನಾಂಗ ಅಥವಾ ದರ್ಜೆಯ ಭೇದವಿಲ್ಲ. ಇದು ದೇವರು ಹಗೆಮಾಡುವಂಥಾ ವಿಷಯವಾಗಿದೆ. ಗಲಾತ್ಯ 3: 28; ಪ್ರಕ. 7: 9; ಅ. ಕೃ. 10: 34, 35; ಯಾಕೋಬ 2: 8, 9

## ಪ್ರಪಂಚದಿಂದ ನನ್ನನ್ನು ಕಳಂಕವಿಲ್ಲದಂತೆ ಇಟ್ಟುಕೊಳ್ಳುವುದು

53. ಕೆಟ್ಟ ಆಲೋಚನೆಗಳನ್ನು ಉದ್ದೇಶಿಸುವ ವಿಷಯುಗಳನ್ನು ಕೆಟ್ಟ ಚಲನಚಿತ್ರಗಳು, ಪತ್ರಿಕೆಗಳು, ಪುಸ್ತಕಗಳು ಅಥವಾ ಹೀನಾಯಕರವಾದ ಮಾತುಗಳು ಮುಂತಾದ ಕೆಟ್ಟ ಆಲೋಚನೆಗಳನ್ನು ಉದ್ದೇಶಿಸುವ ವಿಷಯುಗಳನ್ನು ನಾನು ಯಾವಾಗಲೂ ತಡೆಗಟ್ಟಬೇಕು. ಫಿಲಿಪ್ಪಿ 4: 8; ಎಫೆಸ 5: 3-4; ರೋಮಾ. 1: 28-32

54. ದೇವದೂಷಣೆ ಮತ್ತು ಒರಟು ಭಾಷೆಯಿಂದ ನನ್ನ ಮಾತುಗಳನ್ನು ದೂರವಿಡಬೇಕು. ನನ್ನ ಪ್ರತಿಯೊಂದು ಮಾತನ್ನು ದೇವರು ಕೇಳುತ್ತಾನೆ. ಎಫೆಸ 4: 29; ಕೊಲೊಸ್ಸೆ 3: 8; ಮತ್ತಾಯ 5: 37; ಮತ್ತಾಯ 12: 36

55. ಗಾಳಿಮಾತಾಡುವುದು ಮತ್ತು ಚಾಡಿ ಹೇಳುವುದು ಮಹಾ

ಕೆಟ್ಟವುಗಳು. ನಾನು ಅವುಗಳನ್ನು ಸಂಪೂರ್ಣವಾಗಿ ತಡೆಯಬೇಕು. ಪೇತ್ರ 3: 2; ಎಫೆಸ 4: 31, 32

56. ಚಿಕ್ಕ ವಿಷಯಗಳಲ್ಲಿಯೂ ವಂಚನೆ ಮತ್ತು ಅಪ್ರಮಾಣಿಕತೆಗಳು ಕೆಟ್ಟದ್ದಾಗಿವೆ. ಅವುಗಳನ್ನು ನನ್ನ ಜೀವನದಿಂದ ಹೊರಗಿಡಬೇಕು. ಪೇತ್ರ 1: 10; 1 ಪೇತ್ರ 2: 1, 21-22; ಅ.ಕೃ. 5: 1-11; ಪ್ರಕ. 22: 15

57. ಯಾರೊಬ್ಬರಮೇಲೂ ನಾನು ನ್ಯಾಯಾಸ್ಥಾನಗಳಲ್ಲಿ ದಾವೆ ಹಾಕಬಾರದು. ಇದು ಪ್ರಾಪಂಚಿಕ ಮಾರ್ಗವಾಗಿದೆ. ಅಕ್ರಮಗಳನ್ನು ಸಹಿಸಿಕೊಳ್ಳುವುದೇ ಕ್ರಿಸ್ತನ ಮಾರ್ಗವಾಗಿದೆ. ೨ ಕೊರಿ. 6:1-7; ಮತ್ತಾಯ 5: 38, 42

58. ಕ್ರಿಸ್ತನ ಅನುಯಾಯಿಯಾಗಿ, ಚುನಾವಣೆಗಳಲ್ಲಿ ಮತ್ತು ಪ್ರಾಪಂಚಿಕ ರಾಜಕೀಯದಲ್ಲಿ ನಾನು ಭಾಗವಹಿಸಬಾರದು ಯಾಕಂದರೆ ರಾಜಕೀಯವೆಂದರೆ ಮನುಷ್ಯರಲ್ಲಿ ನಂಬಿಕೆ ಇಡುವುದು ಎಂದರ್ಥ—ನನ್ನ ನಂಬಿಕೆಯು ದೇವರಲ್ಲಿಯೂ ಮತ್ತು ಮುಂದೆ ಬರುವ ಆತನ ರಾಜ್ಯ ದಲ್ಲಿಯೂ ಇರಬೇಕು. 2 ಕೊರಿ. 6: 14-18; 1 ಪೇತ್ರ 2: 11, 12; 1 ಯೋಹಾನ 1: 6; 1 ಯೋಹಾನ 2: 15; ಯೋಹಾನ 18: 36

59. ನಾನು ನನ್ನ ನಿಷ್ಠೆಯನ್ನು ಕ್ರಿಸ್ತನಿಗೆ ಅರ್ಪಿಸಿರುವುದರಿಂದಲೂ ಮತ್ತು ಎಲ್ಲಾ ಜನರೊಂದಿಗೆ ಸಮಾಧಾನದಿಂದ ಜೀವಿಸಲು ಆಜ್ಞಾಪಿಸಿರು ವುದರಿಂದಲೂ, ನಾನು ಸೈನ್ಯವನ್ನು ಅಥವಾ ಪೋಲೀಸ್ ಪಡೆಯನ್ನು ಸೇರುವುದಾಗಲೀ ಅಥವಾ ಯಾವುದೇ ಸೈನ್ಯ ಕಾರ್ಯಚರಣೆಯಲ್ಲಾಗಲೀ ಭಾಗವಹಿಸುವುದಾಗಲೀ ಮಾಡಬಾರದು. ಮತ್ತಾಯ 26: 52; ಯೋಹಾನ 18: 36

60. ಕ್ರಿಸ್ತನ ಅನುಯಾಯಿಯಾಗಿ, 'ಮೇಸನಿಕ್' ಭ್ರಾತೃತ್ವ ಅಥವಾ

ಅದೇ ತರಹದ ಇನ್ನಾವುದೇ ಸಮಾಜದಲ್ಲಿ ನಾನು ಪಾಲ್ಗೊಳ್ಳಬಾರದು, ಇಹಲೋಕಕ್ಕೆ ಸಂಬಂಧವಿಲ್ಲದ ಒಂದು ಮಹತ್ತರ ಸಹಭಾಗಿತ್ವ ನಮಗಿದೆ. 1 ಕೊರಿ. 10: 20, 21; 2 ಕೊರಿ. 6: 14, 15; 1 ಯೋಹಾನ 1: 3

61. ಪ್ರಾಪಂಚಿಕ ಆಶೆಗಳಿಂದ ಮತ್ತು ನನ್ನ ಆಧ್ಯಾತ್ಮಿಕಜೀವನ ಹಾಗೂ ಸಭಾಸೇವೆಗೆ ಅದರಿಂದಾಗುವ ದುಷ್ಪರಿಣಾಮಗಳಿಂದ ನನ್ನನ್ನು ರಕ್ಷಿಸಿಕೊಳ್ಳಬೇಕು. 1 ತಿಮೋಥೆ 6: 10; 2 ತಿಮೋ. 3: 1, 2

62. ಕುಡುಕತನವು ಕೆಟ್ಟದ್ದು ಮತ್ತು ನಿಷೇಧಿಸಲ್ಪಟ್ಟಿರುತ್ತದೆ. ನನ್ನ ಮನಸ್ಸು ಯಾವಾಗಲೂ ಪರಿಶುದ್ಧವಾದದ್ದನ್ನೇ ಆಲೋಚಿಸುವ ಹಾಗೆ ಸ್ವಚ್ಛವಾಗಿರಬೇಕು—ಕುಡಿತದಿಂದ ಗಲಿಬಿಲಿಗೊಂಡಿರಬಾರದು. ರೋಮಾ. 13: 13, 14; 1 ಥೆಸ. 5: 6, 7; ಎಫೆಸ 5: 18

63. ನಾನು ನನ್ನ ದೇಶದ ಕಾನೂನುಗಳ ಪಾಲನೆ ಬಗ್ಗೆ ಚಿಕ್ಕ ವಿಷಯವಾಗಲೀ ದೊಡ್ಡ ವಿಷಯವಾಗಲೀ ತುಂಬಾ ಎಚ್ಚರಿಕೆ ವಹಿಸಬೇಕು. ಕ್ರಿಸ್ತನಿಗೆ ವಿರುದ್ಧವಾದ ಕಾರ್ಯಗಳಿಗೆ ಅದು ನನ್ನನ್ನು ಒತ್ತಾಯಿಸಿದರೆ ಮಾತ್ರ ಅದನ್ನು ಉಲ್ಲಂಘನೆ ಮಾಡುವುದು ಸರಿಯಾದುದು. ರೋಮಾ. 13: 1-7; 1 ಪೇತ್ರ 2: 13; 14 ತೀತ 3: 1

## ದೇವರ ಮುಂದೆ ನನ್ನ ಜೀವಿತವನ್ನು ಪರಿಶುದ್ಧವನ್ನಾಗಿ ಮಾಡುವುದು

64. ನಾನು ಯಾವಾಗಲೂ ಮಾಂಸದ (ದೇಹದ) ದುರಿಚ್ಛೆಗಳಿಗೆ ವಿರುದ್ಧವಾಗಿ ಹೋರಾಡಬೇಕು. ನನ್ನ ಸುತ್ತಮುತ್ತಲಿರುವವರ ಮನೋಭಾವದಿಂದ ಈ ವಿಷಯದಲ್ಲಿ ಧೃತಿಗೆಡಬಾರದು. ಗಲಾತ್ಯ 5: 16, 24; 2 ತಿಮೊಥೆ 2: 22; ಯಾಕೋಬ 1: 3, 4

65. ಆತುರದ ಕೋಪಕ್ಕೆ ಎಡೆಕೊಡುವುದು ತಪ್ಪು. ಅಂಥಹು

ದೊಂದಿದ್ದರೆ ನಾನದನ್ನು ಹತೋಟಿಯಲ್ಲಿಡಲು ಯಾವಾಗಲೂ ಹೋರಾಡಬೇಕು. ಯಾಕೋಬ 1: 19, 20; ಜ್ಞಾನೋಕ್ತಿ 16: 31; ಜ್ಞಾನೋಕ್ತಿ 19: 11

66. ನಾನು ಯಾವಾಗಲೂ ಸತ್ಯವನ್ನೇ ನುಡಿಯಬೇಕು. ಸುಳ್ಳಾಡುವುದು ಒಂದು ದೊಡ್ಡ ತಪ್ಪು. ಏದೆನ್ನಿನ ಸರ್ಪದ ಸುಳ್ಳಿನ ಪರಿಣಾಮವು ಇನ್ನೂ ನಮ್ಮಲ್ಲಿದೆ. ಎಫೆಸ 4: 25; ಕೊಲೊಸ್ಸೆ 3: 7; ಅ. ಕೃ. 5: 1-11; ಪ್ರಕ 22: 15

67. ನಾನು ಮಾಡುವುದೆಲ್ಲವೂ ಮತ್ತು ನುಡಿಯುವುದೂ ನಾನು ಕ್ರಿಸ್ತನ ಶಿಷ್ಯನೆಂದು ತೋರಿಸಬೇಕು. ಮತ್ತು ಆತನನ್ನು ನಿರಾಕರಿಸುವ ವಿರುದ್ಧ ನಾನು ತುಂಬಾ ಎಚ್ಚರಿಕೆ ವಹಿಸಬೇಕು. ಲೂಕ 12: 8; ಮಾರ್ಕ 8: 38, 2 ತಿಮೋಥೆ 1: 8

68. ನನಗಿಂತ ಉತ್ತಮ ಸ್ಥಿತಿಯಲ್ಲಿರುವವರನ್ನು ಕಂಡು ನಾನು ಕರುಬ (ಹೊಟ್ಟೆಕಿಚ್ಚು) ಬಾರದು ಲೂಕ 12: 15; ಮತ್ತಾಯ 6: 19; ಇಬ್ರಿಯ 13: 5

69. "ಕರ್ತನ ಚಿತ್ತವಾದರೆ" "ದೇವರ ಕೃಪೆಯಿಂದ ಎಂದು ಹೇಳಿ ನನ್ನ ಜೀವಿತದಲ್ಲಿ ತಂದೆಯ ಹತೋಟಿ ಮತ್ತು ಅನುಗ್ರಹವನ್ನು ನಾನು ಒಪ್ಪಿಕೊಳ್ಳಬೇಕು. ಯಾಕೋಬ 4: 14, 15; ಜ್ಞಾನೋಕ್ತಿ 3: 6

70. ನಾನು ಯಾವಾಗಲೂ ಕ್ರಿಸ್ತನನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ವಿಶೇಷವಾಗಿ ತೊಂದರೆಯನ್ನೆದುರಿಸುವಾಗ, "ಯೇಸುಸ್ವಾಮಿಯು ಏನು ಮಾಡುತ್ತಾನೆ?" ಎಂದು ನನ್ನನ್ನು ನಾನೇ ಕೇಳಿಕೊಳ್ಳಬೇಕು. 1 ಪೇತ್ರ 2: 21; 23 ಯೋಹಾನ 13: 15

71. ಎಲ್ಲಾ ವಿಷಯಗಳಲ್ಲಿಯೂ ನಿರ್ಮಲತೆ ಮತ್ತು ಪರಿಶುದ್ಧತೆಗೆ

ನಾನು ಗುರಿಪಡಬೇಕು., ಮತ್ತು ಈರೀತಿ ಪರಲೋಕದಲ್ಲಿರುವ ನನ್ನ ಧಣಿಯನ್ನು ಸುಪ್ರೀತನನ್ನಾಗಿ ಮಾಡಬೇಕು.

72. ನನ್ನ ಕರ್ತನ ಬರುವಿಕೆಯು ಹತ್ತಿರವಾಗಿದೆಯೆಂದು ನಾನು ನಂಬುತ್ತೇನೆ. ಅದನ್ನು ನಿಜವಾಗಿಯೂ ನಂಬುವವನಾಗಿ ನಾನು ಜೀವಿಸಬೇಕು. ಮತ್ತಾಯ 24: 44; ಮತ್ತಾಯ 10: 37; 38 ಲೂಕ 12: 35-37; 2 ಪೇತ್ರ 3: 13, 14

## ದೇವರು ಹೇಗೆ ನನಗೆ ಸಹಾಯ ಮಾಡುತ್ತಾನೆ

73. ದೇವರನ್ನು ಸುಪ್ರೀತನನ್ನಾಗಿ ಮಾಡಲು ನನ್ನ ಪ್ರಯತ್ನಗಳಲ್ಲಿ ನಾನು ಸಂತುಷ್ಟನಾಗಿರಬಾರದು. ನಾನು ಒಪ್ಪಿಕೊಳ್ಳಲು ಇಷ್ಟ ಪಡುವುದಕ್ಕಿಂತಲೂ ನಾನು ಬಲಹೀನನಾಗಿದ್ದೇನೆ. 1 ಕೊರಿ. 10: 12; ರೊಮಾ. 5: 12; ರೊಮಾ. 7: 18-25

74. ನಾನು ಉತ್ತಮ ರೀತಿಯಲ್ಲಿ ನಡೆಯುವುದಕ್ಕೆ ನನ್ನನ್ನು ಬಲಪಡಿಸಲು ಆಗಾಗ್ಗೆ ದೇವರನ್ನು ಕೇಳಿಕೊಳ್ಳಬೇಕು. ಯಾರು ಕೇಳುತ್ತಾರೋ ಅವರಿಗೆ ಹೆಚ್ಚಿನ ಸಹಾಯವು ಕೊಡಲ್ಪಡುವುದು. ಫಿಲಿಪ್ಪಿ. 4: 6, 13; ಯಾಕೋಬ 1: 5, 6; 2 ಕೊರಿ. 12: 9; ಎಫೆಸ 3: 16

75. ನಾನು ತುಂಬಾ ಬಲಹೀನನೂ ಮತ್ತು ಹೆಚ್ಚು ಪಾಪ ಮಾಡಿದವನೂ ಆಗಿದ್ದರೂ ಕೂಡ, ನಾನು ಧೃತಿಗೆಡದೆ ಬಿಟ್ಟು ಬಿಡಬಾರದು. ನಾನು ಮಾಡಿದ್ದಕ್ಕೆ ನಿಜವಾಗಿಯೂ ವ್ಯಥೆಪಟ್ಟರೆ (ಪಶ್ಚಾತಾಪ) ಮತ್ತು ಮುಂದೆ ನಾನು ಉತ್ತಮ ರೀತಿಯಲ್ಲಿ ನಡೆದುಕೊಳ್ಳಲು ನಿಶ್ಚಯಿಸಿದರೆ, ದೇವರು ನನ್ನನ್ನು ಕ್ಷಮಿಸಿ, ಮತ್ತೊಮ್ಮೆ ಪ್ರಯತ್ನಿಸಲು ನನಗೆ ಸಹಾಯ ಮಾಡುತ್ತಾನೆ. ಲೂಕ 15: 11-32; 2 ಕೊರಿ. 7: 10; 1 ಯೋಹಾನ 1: 9

## ಸತ್ಯ

"ಸತ್ಯವನ್ನು ಎಂದರೆ ಜ್ಞಾನ ಸುಶಿಕ್ಷ ವಿವೇಕಗಳನ್ನು ಕಂಡು[illegible] ಮಾರಿಬಿಡಬೇಡ" ಜ್ಞಾನೋಕ್ತಿ 23:23

"ನಿನ್ನ ನೀತಿಯು ನಿತ್ಯವಾದದ್ದೇ; ನಿನ್ನ ಧರ್ಮಶಾಸ್ತ್ರವು ಸತ್ಯವಾಗಿದೆ" ಕೀರ್ತನೆ 119:142

"ಕೃಪೆಯೂ ಸತ್ಯವೂ ಯೇಸುಕ್ರಿಸ್ತನ ಮುಖಾಂತರ ಬಂದವು" ಯೋಹಾನ 1:17

"ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" ಯೋಹಾನ 8:31-32

"ಆದಕಾರಣ ಸುಳ್ಳಾಡುವದನ್ನು ಬಿಟ್ಟುಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ" ಎಫೆಸ 4:25

**ವಿನಂತಿ:** ಸತ್ಯವೇದದಲ್ಲಿನ ಸತ್ಯಾರ್ಥಗಳನ್ನು ತಿಳಿಯಲಪೇಕ್ಷಿಸುವವರು ಈ ಪುಸ್ತಕದಲ್ಲಿರುವ ವಿಳಾಸಕ್ಕೆ ಬರೆಯುವುದು. ಆಸಕ್ತರಾದ ನಿಮ್ಮ ಕ್ರೈಸ್ತಮಿತ್ರರು ಇದರಲ್ಲಿ ಪಾಲ್ಗೊಳ್ಳುವಂತೆ ಅವರ ವಿಳಾಸಗಳನ್ನು ನಮಗೆ ಕಳುಹಿಸಿ.

ಹೆಚ್ಚಿನ ವಿವರಗಳಿಗೆ:

**ಕ್ರೈಸ್ತ ಸಹೋದರರು**
ಕೇಶವ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ವಿದ್ಯಾನಗರ, ಮಂಡ್ಯ-571 401
ಕರ್ನಾಟಕ

**THE CHRISTADELPHIANS**
G. P. O. Box 159
HYDERBAD-500 001
A.P.